ಮಲ್ಲಿಕಾರ್ಜುನ, ಸುರಧೇನುಪುರ
ಅಪ್ರತಿಮರಿಗೆ ಪ್ರತಿಮೆಗಳು ಯಾಕೆ?



ಅದು ಮರ್ಯಾದಸ್ಥರನ್ನು ಬೀದಿಗೆ ತರುವ ಒಂದು ವಿಧ.

ಅನಸೂಯ ಟಿ., ಕೇದಿಗೆಮನೆ
ನಿಮಗೆ ಪ್ರಶ್ನೆಯನ್ನು ನೋಡಿದ ತಕ್ಷಣ ಥಟ್ ಅಂತ ಉತ್ತರ ಹೊಳೆಯುತ್ತಾ ಗುರುಗಳೆ?
ಥಟ್ ಎಂಬ ಸದ್ದೇನೂ ಬರುವುದಿಲ್ಲ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಕನ್ನಡಿಯನ್ನು ಸ್ವಚ್ಛಗೊಳಿಸಿದರೆ ಪ್ರತಿಬಿಂಬ ಚೆನ್ನಾಗಿ ಕಾಣುತ್ತೆ. ಮನಸ್ಸನ್ನು ಸ್ವಚ್ಛಗೊಳಿಸಿದರೆ?
ಪ್ರತಿ ಬಿಂಬವೂ ಚೆನ್ನಾಗಿ ಕಾಣುತ್ತೆ.

ಜಗದೀಶ ಬಿ. ಹೊಸೂರು, ಮೈಸೂರು
ಸತ್ಯಕ್ಕೆ ಸಾವಿಲ್ಲ ಅಂತಾರೆ. ಸುಳ್ಳಿಗೆ?
ಸಾವಿರಾರು ವಿಲ್ಲಾಗಳು ಇವೆಯಂತೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಎಂಜಿನಿಯರ್, ಡಾಕ್ಟರ್, ಟೀಚರ್, ಕಾರ್ಮಿಕ – ಇವರಲ್ಲಿ ಯಾರು ಮುಖ್ಯ?



ಕಾರ್ಮಿಕನೇ. ಅವನಿಲ್ಲದಿದ್ದರೆ ಈ ಮೂವರಿಗೂ ಗಿರಾಕಿಯೇ ಇರುವುದಿಲ್ಲ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಸದ್ಗುಣ ಮತ್ತು ದುರ್ಗುಣ ಒಂದು ನಾಣ್ಯದ ಎರಡು ಮುಖಗಳೆ?
ಒಂದೇ ವಿಷಯದ ಎರಡು ದೃಷ್ಟಿಕೋನಗಳು; ದಂತಚೋರ ಆನೆಗೆ ವಿಲನ್, ದಂತವ್ಯಾಪಾರಿಗೆ ಹೀರೊ.

ಬಿ. ಚಂದ್ರೇಗೌಡ, ಬೆಂಗಳೂರು
ಮದುವೆಯಾಗದವನನ್ನು 'ಗುಂಡುಗೋವಿ' ಅಂತಾರಲ್ಲ, ಯಾಕೆ?
ಕೋವಿಯಂತೆ ಸದ್ದು ಮಾಡುತ್ತಾ, ರೌಂಡ್ ಹೊಡೆಯುತ್ತಿರುತ್ತಾನಲ್ಲ!

ಜಗದೀಶ ಬಿ. ಹೊಸೂರು, ಮೈಸೂರು
ಟೀವಿ ಧಾರಾವಾಹಿಗಳು ಧಾರೆಯಂತಿರುತ್ತವೆಯೋ ಅಥವಾ ದಾರದಂತಿರುತ್ತವೆಯೋ?
ಧಾರೆಯಂತೆಯೇ – ಅಶ್ರುಧಾರೆ!

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ನನ್ನ ಪ್ರಶ್ನೆ ನಿಮ್ಮ ಪ್ರಶ್ನೆಯಾಗಿ ನಿಮ್ಮ ಉತ್ತರ ಮತ್ತೊಂದು ಪ್ರಶ್ನೆಗೆ ಕಾರಣವಾದರೆ?
ಪ್ರಶ್ನಾತೀತವಾದ ಉತ್ತರವು ದೊರಕಿಬಿಡುತ್ತದೆ.

ವಿ. ಹೇಮಂತಕುಮಾರ್, ಬೆಂಗಳೂರು
ಮಾನ ಮುಚ್ಚಿಕೊಳ್ಳಲು ಬಟ್ಟೆ ಬೇಕು. ಅವಮಾನ ಮುಚ್ಚಿಕೊಳ್ಳಲು?
ಗೋಪ್ಯ ಕಾಪಾಡುವ ಹಿತೈಷಿಗಳ ಸೆಟ್ಟೇ ಬೇಕು.

ಸುಮತಿ ಬೇಲಿಹಳ್ಳಿ, ಶಿವಮೊಗ್ಗ
ಎಲ್ಲ ಹೆಣ್ಣುಗಳೂ ಲಕ್ಷ ದುಡಿಯುವ ಗಂಡೇ ಬೇಕೆಂದರೆ ಕಡಿಮೆ ದುಡಿಯುವ ಗಂಡುಗಳ ಪಾಡೇನು?
ಕಂತೆಗೊಂದು ಬೊಂತೆ ಇದ್ದೇ ಇರುತ್ತದೆ. ಗುಡಿಸಲಿನ ಗಂಡುಗಳೂ ವಿವಾಹವಾಗಿದ್ದಾರಲ್ಲ!

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ನಮ್ಮ ಮನಸ್ಸು ನಮಗೆ ಯಾವಾಗ ಶತ್ರು, ಯಾವಾಗ ಮಿತ್ರ?
ಬಾಡಿದಾಗ, ಅರಳಿದಾಗ.

ನಾಗರಾಜ್ ಬಿ.ಎಸ್. ಶಿವಮೊಗ್ಗ
ಪರದೈವವಾದ ಪತಿಯ ಮೇಲೆ ನಿರಂತರ ಬೈಗುಳವೃಷ್ಟಿ ಸುರಿಸುವ ಹಕ್ಕನ್ನು ಸತಿಗಿತ್ತಿದ್ದು ಸಂಹಿತೆಯೋ, ಸಂವಿಧಾನವೋ?
ಸ್ಲಂ–ವಿಧಾನ. ಪತಿಯ ಕೊಳಕುತನ ಹೆಚ್ಚಿದಷ್ಟೂ ಸತಿಯ ವೃಷ್ಟಿಯೂ ಬಿರುಸು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು
'ಮಾತೃಭಾಷೆ', 'ಮಾತೃಭೂಮಿ' ಎಲ್ಲೆಡೆ ಸ್ತ್ರೀಗೆ ಪ್ರಾಧಾನ್ಯತೆ ಕೊಟ್ಟರೂ 'ಇದು ಪುರುಷಪ್ರಧಾನ ಸಮಾಜ' ಎನ್ನುವುದೇಕೆ?
ಹೆಣ್ಣಿನಂತೆಯೇ ಭಾಷೆ, ಭೂಮಿಗಳನ್ನೂ ಪುರುಷ ಬೇಕಾಬಿಟ್ಟಿ ಬಳಸುವುದರಿಂದ.

## ವಾರದ ಪ್ರಶ್ನೆ

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ
ಕೆಲವರು ನಿದ್ರೆಯಲ್ಲಿ ಗೊರಕೆ ಹೊಡೆಯುತ್ತಾ ಇನ್ನೊಬ್ಬರ ನಿದ್ರೆ ಕೆಡಿಸುತ್ತಾರೆ. ಇದಕ್ಕೇನು ಪರಿಹಾರ?
ಶಾಶ್ವತ ಪರಿಹಾರವೇ ಇದೆ; ಕಾನೂನಿನದೇ ತೊಡಕು – ಮೂಗಿಗೆ ಹತ್ತಿ ತುರುಕುವುದು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಹೆಂಡತಿಯನ್ನು ಧರ್ಮಪತ್ನಿ ಎನ್ನುತ್ತಾರೆ. ಗಂಡನನ್ನು?
ಧರ್ಮಾಧಿಕಾರಿಣಿಯ ಭೃತ್ಯ.

ಪದ್ಮ, ಬೆಂಗಳೂರು
ರಾಜಕಾರಣಿಗಳ ಭಾಷಣದಿಂದ ವಿದ್ಯುತ್ ತಯಾರಿಸುವಂತಿದ್ದರೆ ಹೇಗಿರುತ್ತಿತ್ತು ರಾಮ್?
ಚುನಾವಣಾ ಕಾಲದಲ್ಲಂತೂ ಹೈವೋಲ್ಟೇಜ್ ಪಾಸ್ ಆಗಿ ವಿದ್ಯುದುಪಕರಣಗಳೆಲ್ಲ ಹಾಳಾಗುತ್ತಿದ್ದವು.

ಪಿ. ಜಯವಂತ ಪೈ, ಕುಂದಾಪುರ
ಗಡಿಯಾರಕ್ಕೂ, ಹೃದಯಬಡಿತಕ್ಕೂ ವ್ಯತ್ಯಾಸವೇನು?



ಗಡಿಯಾರದ ವೇಗವು ಅತ್ಯಂತ ಚೆಲುವೆ ಸ್ಪರ್ಶಿಸಿದಾಗಲೂ ಬದಲಾಗುವುದಿಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಶಿಸ್ತಿಲ್ಲದ ಶಿಕ್ಷಣಕ್ಕಿಂತ ಶಿಕ್ಷಣವಿಲ್ಲದ ಶಿಸ್ತೇ ಉತ್ತಮ; ಇದನ್ನು ರಾಜಕೀಯಕ್ಕೆ ಹೋಲಿಸಿದರೆ?
ಹೆಡ್‌ವೇಯ್ಟ್ ಇರುವ ಮತದಾರನಿಗಿಂತ ಹೆಬ್ಬೆಟ್ಟಿನ ಮತದಾರನೇ ಲೇಸು.

ಬಿ. ಚಂದ್ರೇಗೌಡ, ಬೆಂಗಳೂರು
ರಾಜಕಾರಣದ ಮೋಹಕ್ಕೂ, ಹೆಣ್ಣಿನ ಮೋಹಕ್ಕೂ ವ್ಯತ್ಯಾಸ?
ವಯಸ್ಸಾದಂತೆ ಹೆಣ್ಣಿನ ಮೋಹ ತಗ್ಗುತ್ತದೆ.

■ ರಾಮ್